**ದಿನಾಂಕಃ 11/04/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಡಿಕ್ರಿದಾರರ ಪರ** ಶ್ರೀ ಹೆಚ್.ಎನ್.ಯು **ವಕೀಲರಿಂದಃ**

1. ಡಿಕ್ರಿದಾರರು ಈ ಅರ್ಜಿಯನ್ನು ಸಾಲ ಮರುಪಾವತಿಸಬೇಕೆಂದು ಹೂಡಿದ್ದಾರೆ. ಸಾಕ್ಷಿ ಮುಂದುವರೆದು ನಾನು ಪಡೆದಿದ್ದ ಎಂಟು ಸಾವಿರ ಹಣವನ್ನು ರಾಜೀ ಮಾಡಿ ತೀರಿಸಿದ್ದೆ, ಪುನಃ ಈ ಅರ್ಜಿಯನ್ನು ಸಲ್ಲಿಸಿದ್ದಾರೆಂದು ನುಡಿಯುತ್ತಾರೆ. ಎಷ್ಟು ಹಣವನ್ನು ಮರುಪಾವತಿಸಬೇಕೆಂದು ಈ ಅರ್ಜಿಯನ್ನು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಮೂಲ ಅಸಲು ದಾವೆಯಲ್ಲಿ ನನಗೆ ಸಮನ್ಸ್ ಜಾರಿಯಾಗಿ ವಕೀಲರನ್ನು ನೇಮಿಸಿಕೊಂಡಿದ್ದೆ ಎಂದರೆ ಸರಿ. ನಾನು ಗಿರೀಶ್ ಎಂಬ ವಕೀಲರನ್ನು ನೇಮಿಸಿಕೊಂಡಿದ್ದೆ. ಮೂಲ ದಾವೆಯಲ್ಲಿ ಹಣವನ್ನು ಮರುಪಾವತಿಸಿದ ರಾಜೀ ಮೇಮೋವನ್ನು ಸಲ್ಲಿಸಲು ತೊಂದರೆ ಇರಲಿಲ್ಲ. ನಾನು ಮತ್ತು ಡಿಕ್ರಿದಾರರು ಸೇರಿ ರಾಜೀ ಮಾಡಿಕೊಂಡಿದ್ದೆವು. ಸದರಿ ವಿಚಾರವನ್ನು ಮೂಲ ದಾವೆಯಲ್ಲಿ ತಿಳಿಸಿದ್ದೇನೆ.

2. ನನ್ನ ತಂದೆಯ ಹೆಸರು ಸಣ್ಣಯ್ಯ. ನನ್ನ ತಾಯಿಯ ಹೆಸರು ಕಾಳಮ್ಮ. ನನ್ನ ತಂದೆ ತಾಯಿಗೆ ನಾನು ಒಬ್ಬ ಗಂಡು ಮಗ. ಇಬ್ಬರು ಹೆಣ್ಣು ಮಕ್ಕಳಿದ್ದಾರೆ, ಅವರ ಹೆಸರು ಸುಧಾ ಮತ್ತು ಆಶಾ. ನನ್ನ ಆರ್.ಡಿ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನನಗೆ ಚರ ಮತ್ತು ಸ್ಥಿರ ಸ್ವತ್ತುಗಳು ಇಲ್ಲವೆಂದು ಬರೆಸಿದ್ದೇನೆ. ನನ್ನ ತಂದೆ ಮತ್ತು ತಾಯಿಯ ಹೆಸರಿನಲ್ಲಿ ಸ್ವತ್ತುಗಳು ಇಲ್ಲವೆಂದು ದೃಢೀಕರಣ ಪತ್ರವನ್ನು ತಹಸೀಲ್ದಾರ್ ರವರಿಂದ ಪಡೆದಿದ್ದೇನೆ. ಅದನ್ನು ನನ್ನ ವಕೀಲರಿಗೆ ನೀಡಿದ್ದೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಇಲ್ಲವೋ ಎಂದು ನಾನು ತಿಳಿದುಕೊಂಡಿಲ್ಲ.

3. ನನ್ನ ಹೆಂಡತಿ ಹೆಸರು ಲತಾ. ಶ್ರೀಮತಿ ಲತಾ ಕೋಂ ಗುರುಸ್ವಾಮಿ ಎಂದರೆ ನನ್ನ ಹೆಂಡತಿ. ನನ್ನ ಹೆಂಡತಿಯ ಹೆಸರಿನಲ್ಲಿ ಯಾವುದೇ ಮತ್ತು ವಾಣಿಜ್ಯ ಮಳಿಗೆಗಳು ಇಲ್ಲ. ನಾವು ಪಿರಿಯಾಪಟ್ಟಣದ ಈಡಿಗರ ಬೀದಿಯಲ್ಲಿ ವಾಸಿಸುತ್ತಿದ್ದೇನೆ. ಅಸೆಸ್ಮೆಂಟ್ ನಂಃ1114, ಈಡಿಗರ ಬೀದಿಯಲ್ಲಿರುವ ಸ್ವತ್ತು ಪುಟ್ಟೇಗೌಡರ ಪತ್ನಿ ಶಾರದಮ್ಮ,

ಗುರುಸ್ವಾಮಿ ಬಿನ್ ಪುಟ್ಟೇಗೌಡ, ಕೃಷ್ಣ ಬಿನ್ ಪುಟ್ಟೇಗೌಡ ಮತ್ತು ಶ್ರೀಮತಿ ಲತಾ ಕೋಂ ಗುರುಸ್ವಾಮಿಯವರಿಗೆ ಪೌತಿ ಖಾತೆಯಾಗಿದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಆಧಾರ್ ಕಾರ್ಡ್ ಹಾಜರುಪಡಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಹೆಂಡತಿಯ ಹೆಸರು ಮಂಜಳಾ ಎಂದು ಬರೆಸಿದ್ದೇನೆ ಎಂದರೆ ಸರಿ. ಮಂಜುಳ ರವರನ್ನ ಲತಾ ಎಂದು ಕರೆಯುತ್ತಾರೆ ಎಂಬ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಮಂಜುಳ ಎಂದು ಮಾತ್ರ ಕರೆಯುತ್ತಾರೆ ಎಂದು ನುಡಿಯುತ್ತಾರೆ. ಎಲ್ಲಾ ಕಂದಾಯ ದಾಖಲೆಗಳಲ್ಲಿ ಮತ್ತು ಇತರೆ ದಾಖಲೆಗಳಲ್ಲಿ ನನ್ನ ಹೆಂಡತಿಯ ಹೆಸರು ಮಂಜುಳ ಎಂದು ಬರೆದಿದೆ.

4. ತಹಶೀಲ್ದಾರ್ ಮತ್ತು ಪುರಸಭೆಯವರ ಮುಂದೆ ನನಗಾಗಲೀ, ನನ್ನ ಹೆಂಡತಿ, ಮಕ್ಕಳು ಮತ್ತು ತಂದೆಗಾಗಲೀ ಚರ ಮತ್ತು ಸ್ಥಿರ ಸ್ವತ್ತುಗಳು ಇಲ್ಲವೆಂದು ಅರ್ಜಿಯನ್ನು ಸಲ್ಲಿಸಿದ್ದೇನೆ. ಸದರಿ ಅರ್ಜಿಯ ದೃಢೀಕೃತ ನಕಲನ್ನು ನನ್ನ ವಕೀಲರಿಗೆ ನೀಡಿದ್ದೇನೆ. ಯಾವ ದಿನಾಂಕದಂದು ಆ ರೀತಿ ಅರ್ಜಿಯನ್ನು ನೀಡಿದ್ದೆ ಎಂದು ಗೊತ್ತಿಲ್ಲ. ನನ್ನ ಬಳಿ ಸ್ಕೂಟರ್ ಇಲ್ಲ. ನಾನು ಅದೇ ಗಾಡಿಯಲ್ಲಿ ಮನೆಯಿಂದ ಪಿರಿಯಾಪಟ್ಟಣಕ್ಕೆ ಬಂದಿದ್ದೇನೆ ಎಂದರೆ ಸರಿ. ಪುರಸಭೆಯವರಿಂದ ನನಗೆ ಚರ ಸ್ಥಿರ ಸ್ವತ್ತುಗಳು ಇಲ್ಲವೆಂದು ದಾಖಲೆ ಪಡೆದಿಲ್ಲ.

5. ನನಗೆ ಇಬ್ಬರು ಗಂಡು ಮಕ್ಕಳು. ನನ್ನ ತಂದೆ ತಾಯಿ ಮತ್ತು ಹೆಂಡತಿ ಮಕ್ಕಳ ಆರ್.ಡಿ ವಂಶವೃಕ್ಷವನ್ನು ಹಾಜರಪಡಿಸಲು ತೊಂದರೆ ಇದೆ. ನನಗೆ ಹುಷಾರಿರಲಿಲ್ಲ ಹಾಗಾಗಿ ತೊಂದರೆ ಇದೆ. ನನಗೆ ಬಿ.ಪಿ, ಶುಗರ್ ಮತ್ತು ಹಲ್ಲುನೋವು ಇದೆ. ನಾನು ಕಳೆದ 7 ವರ್ಷಗಳಿಂದ ಅನಾರೋಗ್ಯದಿಂದ ಬಳಲುತಿದ್ದೇನೆ. ಕಳೆದ 7 ವರ್ಷಗಳಿಂದಲೂ ನನಗೆ ಹಲ್ಲುನೋವಿದ್ದು, ಹಲ್ಲುಗಳನ್ನು ಕೀಳಿಸಿದ್ದೇನೆ. ಹಲ್ಲು ನೋವಿನ ಚಿಕಿತ್ಸೆಯನ್ನು ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆ ಮತ್ತು ಪಿರಿಯಾಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನನ್ನ ಹಲ್ಲಿಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ, ಅದರೆ ಹಲ್ಲನ್ನು ಕಿತ್ತಿದ್ದಾರೆ.

6. ಅಸ್ಸೆಸ್ಮೆಂಟ್ ನಂ.1114 ರ ಸ್ವತ್ತನ್ನು ಅಟ್ಯಾಚ್ಮೆಂಟ್ ಮಾಡಲು ನನಗೆ ತೊಂದರೆ ಇಲ್ಲ. ಕಾರಣ ಅದು ನಮ್ಮದಲ್ಲ. ಆರ್.ಡಿ ವಂಶವೃಕ್ಷವನ್ನು ಹಾಜರುಪಡಿಸಲು ನಾನು

ಸ್ವಾಷ್ಟವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಲತಾ ಎಂದು ಇದ್ದರೂ ಸಹ ಮಂಜುಳ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಕೀಲರಿಗೆ ಲತಾ ಎಂದು ತಿಳಿಸಿದ್ದರೂ ಸಹ ನನ್ನ ಪ್ರಮಾಣ ಪತ್ರದಲ್ಲಿ ಮಂಜುಳ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ಜಂಟಿ ಖಾತೆ ಇದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ಮಕ್ಕಳು ಗಾರೆಕೆಲಸ ಮಾಡುತ್ತಿದ್ದಾರೆ. ನನ್ನ ಮಕ್ಕಳು ಕಾರ್ಮಿಕರ ಸಂಘಟಿತ ಪ್ರಮಾಣ ಪತ್ರವನ್ನು ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ಪಡೆಯಲು ತೊಂದರೆ ಇಲ್ಲ. ನಾನು ಕಳೆದ 10 ವರ್ಷಗಳಿಂದ ನಾನು ಬಜ್ಜಿ,ಬೋಂಡಾ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದೇನೆ. ಸದರಿ ಕೆಲಸವನ್ನು ಮಾಡುವಾಗ ಪುರಸಭೆಯಿಂದ 12 ವರ್ಷಗಳ ಹಿಂದೆ ಪರವಾನಿಗೆ ಪಡೆದಿದ್ದೆ. ಮುಂದುವರೆದು ಈಗ ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಹೋಟೇಲ್ ನಲ್ಲಿ ಈಗ ಬಜ್ಜಿ ಬೋಂಡಾ ಮಾಡುತ್ತಿದ್ದೇನೆ. ಹೋಟೇಲ್ ನ ಮಾಲೀಕರ ಹೆಸರು ಏನೆಂದರೆ ಅವರ ಹೆಸರನ್ನು ನಾನು ತಿಳಿದುಕೊಂಡಿಲ್ಲ, ಯಾರು ಕರೆಯುತ್ತಾರೋ ಅವರ ಬಳಿ ಕೆಲಸಕ್ಕೆ ಹೋಗುತ್ತೇನೆ ಎಂದು ನುಡಿಯುತ್ತಾರೆ. ಮಣಿ ಮತ್ತು ರಾಮಣ್ಣ ಎಂಬುವವರ ಬಳಿ ಕೆಲಸಕ್ಕೆ ಹೋಗುತ್ತೇನೆ. ಕಳೆದ 20 ವರ್ಷಗಳಿಂದ ನಾನೇ ಬೆಟ್ಟದಪುರ ಸರ್ಕಲ್‌ನಲ್ಲಿ ಅಂಗಡಿ ಹಾಕಿಕೊಂಡು ಬಜ್ಜಿ ಬೋಂಡ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

8. ಅಸೆಸ್ಮೆಂಟ್ ನಂ.1114 ನನ್ನ ಹೆಂಡತಿಯ ಹೆಸರಿನಲ್ಲಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿದಾರರ ಹಣವನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಮಂಜುಳ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ. ಆದರೆ ಲತಾ ಮತ್ತು ಮಂಜುಳ ಎಂದು ಕರೆಯುತ್ತೇವೆ. ನಾನು ಡಿಕ್ರಿದಾರರಿಗೆ ಎಂಟು ಸಾವಿರ ಹಣವನ್ನು ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಸ್ವತ್ತು ಮುಮ್ಮಡಿ ಕಾವಲಿನಲ್ಲಿದ್ದು, ಅದನ್ನು ಮಾರಾಟ

ಮಾಡಿ ಈಗ ನಾವು ವಾಸವಾಗಿರುವ ಮನೆ ಮತ್ತು ವಾಣಿಜ್ಯ ಮಳಿಗೆಯನ್ನು ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮನೆ ಮತ್ತು ಮಳಿಗೆಯಿಂದ ನನಗೆ ಬಾಡಿಗೆ ಬರುತ್ತಿದ್ದು ಆದಾಯ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಸ್ವತ್ತು ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚರಾ ಸ್ವತ್ತು ಇಲ್ಲವೆಂದು ನಾನು ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇನೆ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**